



ಕೂಡ ಅವಳ ತಂದೆಯ ಎದುರಲ್ಲಿ ಅವಳನ್ನು ರಾಗವಾಗಿ, ಬೇಕೆಂದೇ ಇನ್ನೂ ಎರಡು ಶ್ರೀಗಳನ್ನು ಸೇರಿಸಿ ಶ್ರೀ ಶ್ರೀ ಶ್ರೀ ಭುವನೇಶ್ವರಿ ದೇವೀ ಎಂದು ಕರೆಯುತ್ತ, ಅವರು ಎದುರಲ್ಲಿ ಇಲ್ಲದಿದ್ದಾಗ ನಮ್ಮ ಮಾಮೂಲಿ ಹೆಸರಲ್ಲೇ ಕರೆಯುತ್ತಿದ್ದೆವು.

ಕೆಲವರ ಮನೆಗಳಲ್ಲಿ ಮದುವೆಯಾಗಿ ಬರುವ ಸೊಸೆಯ ನಾಮವನ್ನು ಬದಲಾಯಿಸುವ ಪದ್ಧತಿ ಇದೆ. ಇದು ನನ್ನ ಸ್ವಂತ ಅನುಭವವೂ ಹೌದು. ನನಗೆ ತವರಲ್ಲಿ ಅರುಣ ಎಂಬ ಹೆಸರಿದ್ದರೆ, ಗಂಡನ ಮನೆಯಲ್ಲಿ ಸೌಮ್ಯ ಎಂದಾಗಿದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ನನ್ನ ಗಂಡನ ಮನೆಯ ಪದ್ಧತಿಯಾದರೆ, ಎರಡನೆಯದು ನನ್ನ ಗಂಡನ ಹೆಸರು ಅರುಣಕುಮಾರ್. 'ಅರುಣ' ಎಂದು ಯಾರಾದರೂ ಕರೆದರೆ ಇಬ್ಬರೂ ಧಾವಿಸಿಹೋಗಿ ನಿಲ್ಲುವ ಪರಿಸ್ಥಿತಿ! ಅಂತೂ ಇಪ್ಪತ್ತೈದು ವರ್ಷದವರೆಗೆ ಬಳಕೆಯಾದ ನನ್ನ ಒರಿಜಿನಲ್ ನಾಮ ಮದುವೆಯಾದೊಡನೆ ತನ್ನ ಅಸ್ತಿತ್ವದೊಡನೆ ಇನ್ನೊಂದು ಸಹನಾಮವನ್ನೂ ಜೊತೆಯಲ್ಲಿ ಇರಿಸಿಕೊಳ್ಳಬೇಕಾಯಿತು. ಹೊಸತರಲ್ಲಿ ನನ್ನ ವ್ಯಕ್ತಿತ್ವವೇ ಅಲುಗಾಡಿದ ಅನುಭವ ಆಗುತ್ತಿತ್ತು. ಆದರೆ ಬರುಬರುತ್ತಾ ನಾಮದ ವಿಷಯದಲ್ಲಿ ಸ್ಥಿತಪ್ರಜ್ಞತೆ ಬೆಳೆಯಿತು. ಮೊದಲೇ ಹೇಳಿದ ಹಾಗೆ ನಾಮ ನಮ್ಮನ್ನು ಗುರುತಿಸಲಷ್ಟೇ ತಾನೇ ಎಂಬುದು. ಹಾಗಾಗಿ ನನಗೀಗ ಎರಡೆರಡು ನಾಮಗಳು. ಯಾವುದರಿಂದ ಕರೆದರೂ ಓಗೊಡುತ್ತೇನೆ. ನಾಮಗಳೆರಡಾದರೂ ದೇಹ ಒಂದೇ. ಮುಂದೆ ನನಗೆ ಸಮಾಧಾನವಾಗುವ ವಿಷಯ ತಿಳಿದಿದ್ದೆಂದರೆ, ಒಂದೇ ಹೆಸರಿನ ಗಂಡಹೆಂಡತಿ ಬೇಕಾದಷ್ಟು ಜನ ಇದ್ದಾರೆ ಎಂದು – ಶಾಂತಾ–ಶಾಂತಕುಮಾರ್, ವಿಜಯಾ–ವಿಜಯೇಂದ್ರ, ನಾಗವಲ್ಲಿ–ನಾಗೇಶ್, ಮಲ್ಲಮ್ಮ–ಮಲ್ಲೇಶ, ಗಿರಿಜಾ–ಗಿರೀಶ ಇತ್ಯಾದಿ. ನನಗಾದರೂ ಪರವಾಗಿಲ್ಲ ಎರಡೇ ನಾಮಗಳು. ಆದರೆ ನನ್ನ ಗೆಳತಿಗೆ ಮೂರ್ಮೂರು ನಾಮಗಳು! ಆಕೆಯ ಜನ್ಮನಾಮ ಹಾಗೂ ತಂದೆತಾಯಿ ಕರೆಯುವುದು ಸುಮಂಗಲಾ ಆದರೆ, ಶಾಲೆಯಲ್ಲಿ ಮಂಗಳಾ. ಮದುವೆಯಾದಾಗ ಗಂಡನ ಮನೆಯಲ್ಲಿ ನಾಮ ಬದಲಾವಣೆ ಮಾಡಿದ್ದು ಬಾಲ ಕತ್ತರಿಸಿ ಸುಮ ಎಂದು!



ನಾಮಗಳಲ್ಲೂ ಅಡ್ಡನಾಮ, ಮುದ್ದುನಾಮಗಳೂ ಇರುತ್ತವೆ. ಇವು ಅವರವರ ವ್ಯಕ್ತಿತ್ವಕ್ಕೆ ಅನುಗುಣವಾಗಿರುತ್ತವೆ. ಹೇಳುತ್ತಾ ಹೋದರೆ ನಾಮದ ಮಹಿಮೆ ಮುಗಿಯುವುದೇ ಇಲ್ಲ, ಸಹಸ್ರನಾಮಾವಳಿಗಳೇ ಆಗಿಬಿಡುತ್ತವೆ. ಹಾಗಾಗಿ 'ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂಬ ದಾಸವಾಣಿಯೊಂದಿಗೆ ನಾಮಾಯಣಕ್ಕೆ ವಿರಾಮ ನೀಡುತ್ತೇನೆ.


### ಅರುಣಾ ಕೆ.ಆರ್.

ಶೃಂಗೇರಿಯ ಅರುಣಾ ಬಿ.ಎಸ್‌ಸಿ. ಬಳಿಕ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ., ಜೈನ್ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಪದವಿ ಪಡೆದಿದ್ದಾರೆ. ಪ್ರಸ್ತುತ ಕನ್ನಡ ಮತ್ತು ಅಪಭ್ರಂಶ ಭಾಷೆಗಳಲ್ಲಿ ಹತ್ತನೇ ಶತಮಾನದ ಜೈನ ಕಾವ್ಯಗಳ ಬಗ್ಗೆ ಸಂಶೋಧನಾ ಅಧ್ಯಯನ ಮಾಡುತ್ತಿದ್ದಾರೆ. ಶಾಂತಿನಾಥ ಕವಿಯ 'ಸುಕುಮಾರ ಚರಿತೆ'ಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. 'ನನ್ನೊಳಗಿನ ಮಲೆನಾಡು' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ. ಆಕಾಶವಾಣಿಯಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.